ಶ್ರೀ ಪಿ. ಎಂ. ನಾಡಗೌಡ.—ಹಣದ ದುರುಪಯೋಗವಾಗಿದೆಯೆಂದು ತಿಳಿದುಬಂದಕೂಡಲೆ ಮಾನ್ಯ ಸದಸ್ಯರುಗಳು ತಿಳಿಸಿದರೆ ಶೀಘ್ರವಾಗಿ ಅಪರಾಧಿಗಳನ್ನು ಕೋರ್ಟ್‌ಮುಂದೆ ಹಾಜರ್ ಮಾಡಿ ಸಿವಿಲ್ ಕ್ರಮ ತೆಗೆದುಕೊಳ್ಳುತ್ತೇವೆ. ಇಂತಹ ವಿಚಾರಗಳಲ್ಲಿ ಸರ್ಕಾರದವರು ಕಾನೂನು ಪ್ರಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹಣದ ದುರುಪಯೋಗವಾಗಿರುವ ಸಹಕಾರ ಸಂಘಗಳು 7-8 ಇವೆ. ಕೆಲವು ಸಹಕಾರ ಸಂಘಗಳಲ್ಲಿ ಇನ್ನೂ ಜನರರ್ ಬಾಡಿ ಮೀಟಿಂಗ್ ಕೂಡ ಆಗದಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಂ. ನಾಡಗೌಡ—ಈ ಹಣದ ದುರುಪಯೋಗವಾಗಿರುವ ಸೊಸೈಟಿ ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳುವುದು ಅವಶ್ಯಕವೆಂದು ಕಾಣುತ್ತದೆ. ಸರ್ಕಾರದವರು ಈ ಸೊಸೈಟಿಯ ಕಾಗದಗಳನ್ನು ತೆಗೆದುಕೊಳ್ಳಲು ಡೆಪ್ಯೂಟಿ ರಿಜಿಸ್ಟ್ರಾರ್ ಅವರು ಪ್ರಯತ್ನಪಟ್ಟಾಗ ಆಗಲಿಲ್ಲ. ಕೊನೆಗೆ ಪೋಲೀಸರನ್ನು ಕಳಿಸಿ ಕಾಗದಗಳನ್ನು ವಶಪಡಿಸಿಕೊಳ್ಳಲಾಯಿತು. ಎಷ್ಟು ಹಣ ಲ್ಯಾಪ್ಸ್ ಆಗಿದೆ ಎಂಬುದನ್ನು ತಿಳಿದು ನಂತರ ಕ್ರಿಮಿನಲ್ ಕೇಸ್ ಹಾಕಲಾಯಿತು. ಆ ಬಗ್ಗೆ ಇಬ್ಬರು ಅಪರಾಧಿಗಳು ಇದ್ದಾರೆ, ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎ. ಕೆ. ಬೊಮ್ಮೇಗೌಡ.—ಹಣದ ದುರುಪಯೋಗ ಮಾಡಿದವರ ಮೇಲೆ ಕೇಸ್ ಆಗಿದ್ದರೂ ಸಹ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರ ಗೊತ್ತಿಲ್ಲ. ಯಾರು ಹಣದ ದುರುಪಯೋಗ ಮಾಡಿದ್ದಾರೋ, ಅಂಥವರ ಮನೆ, ಹೊಲವನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡಿದ್ದಾರೆ. ಅವರ ಮೇಲೆ ದಯಾದಾಕ್ಷಿಣ್ಯವಿಲ್ಲದೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—13 ಸಂಘಗಳು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಈ 13 ಸೊಸೈಟಿಗಳಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡಿದ್ದೀರಾ. ಈ ಸೊಸೈಟಿಗಳಿಂದ ಸರ್ಕಾರಕ್ಕೆ ಎಷ್ಟು ಬಾಕಿ ವಸೂಲಾಗಬೇಕಾಗಿದೆ ಮತ್ತು ಎಲ್ಲಾ ಸೊಸೈಟಿಗಳದ್ದು ಆಡಿಟ್ ಆಗಿದೆಯೆ ?

ಶ್ರೀ ಪಿ. ಎಂ. ನಾಡಗೌಡ.—ಕೆಲವು ಸೊಸೈಟಿಗಳಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಿಸಿದ್ದೇವೆ. ಈ ಸೊಸೈಟಿಯಲ್ಲಿ ಒಟ್ಟು ರೂಪಾಯಿ 26,439-24 ಹಣದ ದುರುಪಯೋಗವಾಗಿದೆ. ಹಣದ ದುರುಪಯೋಗ ಮಾಡಿದವರ ಮನೆ ಮತ್ತು ಹೊಲವನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಕ್ರಿಮಿನಲ್ ಆಕ್ಷನ್ ತೆಗೆದುಕೊಂಡಿದ್ದೇವೆ. ಸಿವಿಲ್ ಆಕ್ಷನ್ ತೆಗೆದುಕೊಂಡಿದ್ದೇವೆ. ಈ ಕೇಸ್ ಕೋಆಪರೇಟೀವ್ ಟ್ರಿಬ್ಯುನಲ್ ಮುಂದೆ ಇದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ 13 ಸೊಸೈಟಿಗಳಲ್ಲೂ ಆಡಿಟ್ ಮಾಡಿಸಿದ್ದೀರಾ ? ಮತ್ತು ಯಾವುದಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ತಾವು ಕೇಳಿರುವ ಪ್ರಶ್ನೆಯಲ್ಲಿ ಒಂದು ಸಹಕಾರ ಸಂಘದ್ದು ಮಾತ್ರ ಬರುತ್ತದೆ. ಬೇರೆ ಸೊಸೈಟಿಗಳ ವಿವರ ಬೇಕಾದರೆ ತರಿಸಿಕೊಡುತ್ತೇನೆ.

Major Industry at Kolar Town.

*Q.—262. Sri T. CHANNAIAH (Mulbagal).—

Will the Chief Minister be pleased to state :—

(*a*) whether there was any proposal to decentralise industries in Mysore State ;

(*b*) the action taken by Government to locate any big industry at Kolar Town, District Headquarters ?

A.— Sri S. NIJALINGAPPA (Chief Minister).—

(*a*) Yes.

(*b*) At present there is no proposal to start any major industry in Kolar Town District Headquarters.

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಮೈಸೂರು ರಾಜ್ಯದಲ್ಲಿರುವ ಕೈಗಾರಿಕೆಗಳನ್ನು ಏಕೀಂದ್ರಿಕೃತಗೊಳಿಸುವ ಸಲಹೆಯೇನಾದರು ಇದ್ದ ಪಕ್ಷದಲ್ಲಿ ಮೈಸೂರು ಸಂಸ್ಥಾನದ ಯಾವ ಯಾವ ಜಿಲ್ಲಾ ಮುಖ್ಯ ಕೇಂದ್ರಗಳಲ್ಲಿ ಯಾವ ಯಾವ ತರಹ ಕೈಗಾರಿಕೆಗಳನ್ನು ಸ್ಥಾಪಿಸಿದ್ದೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಬಹಳ ದೊಡ್ಡ ಪ್ರಶ್ನೆ. ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳ ಪ್ರಶ್ನೆ ಇದರಲ್ಲಿ ಅಡಕವಾಗಿದೆ. ಮಾನ್ಯ ಸದಸ್ಯರ ಜಿಲ್ಲೆಯಲ್ಲಿ ಈ ಹಾಗಲೇ ಒಂದು ಸಕ್ಕರೆ ಕಾರ್ಖಾನೆ ಇರತಕ್ಕದ್ದು ಅವರ ಗಮನದಲ್ಲಿದೆ. ಹೀಗೆ ಇನ್ನು ಅನೇಕ ಸಿಮೆಂಟ್ ಕಾರ್ಖಾನೆಗಳೂ ಉತ್ತರ ಕರ್ನಾಟಕದಲ್ಲಿವೆ. ಭದ್ರಾವತಿಯಲ್ಲೂ ಒಂದು ಸಿಮೆಂಟ್ ಕಾರ್ಖಾನೆ ಇದೆ. ಹೊಸದುರ್ಗದಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ಉದ್ದೇಶವಿದೆ. ಇನ್ನು ಅನೇಕ ಬಟ್ಟೆ ಮತ್ತು ನೂಲಿನ ಗಿರಣಿಗಳೂ ಇವೆ. ಮಾನ್ಯ ಸದಸ್ಯರು ಕೇಳಿತಕ್ಕ ಜಿಲ್ಲೆಯಲ್ಲಿ ಒಂದು ಬಟ್ಟೆ ಮತ್ತು ನೂಲಿನ ಗಿರಣಿಯನ್ನು ತೆರೆಯಬೇಕೆಂಬ ಪ್ರಯತ್ನವನ್ನು ನಡೆಸಿದ್ದಾಯಿತು. ಆದರೆ ಅದು ನಿಷ್ಫಲವಾದ್ದರಿಂದ ಅದನ್ನು ಕೈಬಿಡಲಾಯಿತು.

ಶ್ರೀ ಟಿ. ಚನ್ನಯ್ಯ.—ಮಾನ್ಯ ಮುಖ್ಯಮಂತ್ರಿಗಳು ಕೋಲಾರ ಜಿಲ್ಲೆಗೆ ಪ್ರವಾಸ ಬಂದಿದ್ದಾಗ 1—2 ಸಾರ್ತಿ ಅಲ್ಲಿ ಯಾವುದಾದರೂ ಒಂದು ಕೈಗಾರಿಕಾ ಕಾರ್ಖಾನೆಯನ್ನು ಪ್ರಾರಂಭ ಮಾಡಿ ಆ ಹಿಂದುಳಿದ ಪ್ರದೇಶಕ್ಕೆ ಅನುಕೂಲ ಮಾಡಿಕೊಡುವುದಾಗಿ ಸಾರ್ವಜನಿಕರ ಮನವಿಗೆ ಉತ್ತರವಾಗಿ ತಾವು ಭರವಸೆಯನ್ನು ಕೊಟ್ಟಿರಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರೇ ನನಗೆ ಒಂದೆರಡು ಸಾರ್ತಿ ಕೇಳಿದ್ದರು. ಅದಕ್ಕೆ ಅಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ನೂಚಿಸಲು ನಾನು ಅವರಿಗೆ ತಿಳಿಸಿದ್ದೆನು. ಹಾಗೆ ಹೇಳಿ ಇಲ್ಲಿಗೆ 4 ವರ್ಷಗಳು ಕಳೆದವು. ಇಲ್ಲಿಯವರೆಗೂ ಈ ಮಾನ್ಯ ಸದಸ್ಯರು ಯಾವ ವಿಚಾರವನ್ನೂ ನನ್ನ ಗಮನಕ್ಕೆ ತರಲಿಲ್ಲ. ಮಾನ್ಯ ಸದಸ್ಯರೇ ನಮ್ಮನ್ನಾಗಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಲ್ಲೆಲ್ಲಿ ಏನೇನು ಕಚ್ಚಾಮಾಲುಗಳು ಸಿಗುತ್ತವೋ ಅಂಥಾ ಕಡೆಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಸರ್ಕಾರದವರು ಏನಾದರೂ ರಿಯಾಯಿತಿಯನ್ನು ತೋರಿಸುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಮಾಡಬೇಕೆಂತಲೇ ನಾವು ಕೆಲವು ಸ್ಥಳಗಳನ್ನು ಕಾದಿಟ್ಟಿದ್ದೇವೆ. ಜನರಿಗೆ ಈ ವಿಚಾರವೆಲ್ಲ ಸಾಕಷ್ಟು ತಿಳುವಳಿಕೆಯನ್ನು ಕೊಡುತ್ತಿದ್ದೇವೆ. ಆದರೆ ಇನ್ನೂ ಯಾರೂ ಮುಂದೆ ಬಂದಿಲ್ಲ. ಬಾರವಿದ್ದರೆ ಅವರನ್ನು ನಾವು ಒತ್ತಾಯ ಮಾಡುವುದಕ್ಕೂ ಆಗುವುದಿಲ್ಲ. ಈಗ ನಾವು—ಮೈಸೂರು, ನಂಜನಗೂಡು, ಹರಿಹರ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಭದ್ರಾವತಿ, ದಾಂಡೇಲಿ ಮತ್ತು ಬೆಂಗಳೂರು ಹಾಗೂ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತು ಬಳ್ಳಾರಿ, ಹೊಸಪೇಟೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸತಕ್ಕವರಿಗೆ ಈ ಸ್ಥಳಗಳನ್ನು ಕಾದಿರಿಸಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಾ ಕಾದಿರಿಸಿದ್ದೇವೆ.

Sri V. S. PATIL.—Will the Government enlighten in respect of co-operative sugar factory, what is the percentage of discount that should go to the Directors' pocket or to the people and what action will they take if there is any variation ?

ಶ್ರೀ ಎಸ್. ನಿಜಲಿಂಗಪ್ಪ.—ಆ ಸೊಸೈಟಿಗಳ ಅನುಕೂಲ ಎಲ್ಲಾ ಸದಸ್ಯರಿಗೂ ಸೇರುತ್ತದೆ. ಅಲ್ಲಿಯ ಮ್ಯಾನೇಜ್‌ಮೆಂಟನ್ನು ನಡೆಸತಕ್ಕ ಡೈರೆಕ್ಟರುಗಳೇನಾದರೂ ಅಂಥ ಕೆಲಸಗಳನ್ನು ಮಾಡಿದ್ದರೆ, ಅದನ್ನು ನಮ್ಮ ಗಮನಕ್ಕೆ ತಂದರೆ ವಿಚಾರ ಮಾಡುತ್ತೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ತಾವು ಕಲ್ಕತ್ತಾಕ್ಕೆ ಭೇಟಿ ಕೊಟ್ಟು ಅಲ್ಲಿಂದ ಕೆಲವರನ್ನು ಇಲ್ಲಿ ಕೈಗಾರಿಕೆಗಳನ್ನು ನಡೆಸಲು ಆಹ್ವಾನಿಸಿದ್ದಿರಲ್ಲಾ, ಆ ಪೈಕಿ ಎಷ್ಟು ಜನರು ಇಲ್ಲಿಗೆ ಬಂದು ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಅಲ್ಲಿಗೆ ಹೋಗಿ ಬಂದು ಇನ್ನೂ ಒಂದೂವರೆ ತಿಂಗಳು ಆಗಲಿಲ್ಲ. ಅಲ್ಲಿ ಕೆಲವರಿಗೆ ಆಹ್ವಾನ ಕೊಟ್ಟಿದೆ, ಕಾಗದ ಪತ್ರಗಳ ವ್ಯವಹಾರ ನಡೆಯುತ್ತಿದೆ. ಅವರು ಇಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆಂಬ ಭರವಸೆ ನನಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೈಸೂರಿನಲ್ಲಿ ಒಂದು ಫ್ಲಾಗ್ ಇಂಡಸ್ಟ್ರಿಯನ್ನು ಸ್ಥಾಪಿಸುವುದಾಗಿ ತಿಳಿಸಿದ್ದ ವಿಚಾರವೇನಾಯಿತು ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಆ ಕೈಗಾರಿಕೆಯನ್ನು ನಡೆಸಲು ಮುಂದೆ ಬಂದರೆ ಸರ್ಕಾರ ದವರು ತಮ್ಮ ಕೈರಾದ ಸಹಾಯಗಳನ್ನು ಮಾಡುತ್ತಾರೆಂದು ತಿಳಿಸುತ್ತೇನೆ.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ Yarn Mill ಸ್ಥಾಪಿಸಲು ಯಾವಾಗ ಕಾರ್ಯಕ್ರಮ ಗಳನ್ನು ಕೈಗೊಳ್ಳುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಅದಕ್ಕೆ ಸಾಕಷ್ಟು ಷೇರ್ ಅಮೌಂಟನ್ನು ಅವರು ಕಲೆಕ್ಟ್ ಮಾಡಿದ್ದರೆ ಅದನ್ನು ಮಾಡಬಹುದು. ಆ ವಿಚಾರದಲ್ಲಿ ಸರ್ಕಾರದವರ ಅಡ್ಡಿ ಏನೂ ಇರುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಲ್ಕತ್ತಾ ಮತ್ತು ಬೊಂಬಾಯಿನಿಂದ ಕೆಲವರು ತಪ್ಪಾಗಿ ಕಾಗದ ಬರೆದಿದ್ದಾರೆಂದು ಹೇಳಿದಿರಿ. ಯಾರ್ಯಾರು, ಯಾವ್ಯಾವ ಕೈಗಾರಿಕೆಗಳನ್ನು ಇಲ್ಲಿ ಮಾಡು ವುದಕ್ಕೆ ಇಚ್ಛೆ ತೋರಿಸಿ ಬರೆದಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ.

Sri H. SIDDAVEERAPPA.—When was the proposal to decentralise the industries mooted and how many industries have already been decentralised in pursuance of that proposal ?

Sri S. NIJALINGAPPA.—'Decentralised' is not the correct word; it ought to be dispersal. Unfortunately, the word used by the questioner is very unhappy.

Sri H. SIDDAVEERAPPA.—In pursuance of that policy, has any action been taken so far ?

Sri S. NIJALINGAPPA.—Certainly, quite a number of industries are being started in various places.

Sri H. SIDDAVEERAPPA.—There are so many industries centralised in Bangalore. Have you seen to it that some are taken away from Bangalore and sent to some other places ?

Sri S. NIJALINGAPPA.—We cannot force them.

Sri H. SIDDAVEERAPPA.—In a recent Government of India publication they have stated that the industrial estates in Mysore have been located entirely due to political reasons. Is it a fact ?

Sri S. NIJALINGAPPA.—That is not a fact and if it is there it is very wrong.

Grant-in-Aid Rules

*Q.—694. Sri N. A. CHANNE GOWDA (Pandavapura).—

Will the Minister for Education be pleased to state :—

(*a*) whether the educational institutions in the State which are getting aid as per the 'Grant-in-aid' Rules are following the said rules;

(*b*) the action taken by them in respect of the educational institutions which have not followed the said rules ?